

'ಬನಾರಸ್' ಚಿತ್ರದಲ್ಲಿ ಸೋನಲ್ ಮೊಂತೆರೊ ಮತ್ತು ಝೈದ್ ಖಾನ್

# ಪ್ಯಾಕಪ್!

## ಚಂದನವನಕ್ಕೆ ಕೊರೊನಾ ಕಾಡ್ಗಿಚ್ಚು

ಕೊರೊನಾ ರಕ್ಕಸ ತನ್ನ ಎರಡನೇ ಹೊಡೆತವನ್ನು ಬೀಸಿ ಹೊಡೆದಿದ್ದಾನೆ. ಮೊದಲನೇ ಹೊಡೆತಕ್ಕೇ ಭಾರತ ಹೆಚ್ಚುಕಮ್ಮಿ ಕುಸಿದುಬೀಳುವ ಹಂತದಲ್ಲಿದೆ. ಕನ್ನಡ ಚಿತ್ರರಂಗವೂ ಈ ಕುಸಿತದಿಂದ ಹೊರತಾಗಿಲ್ಲ. ತೆರೆಯ ಮೇಲೆ ಹತ್ತಾರು ದಾಂಡಿಗರನ್ನು ಹೊಡೆದು ಮೀಸೆ ತಿರುಗಿಸುವ ಸ್ಟಾರ್‌ಗಳೀಗ ಮಂಕಾಗಿದ್ದಾರೆ. ಕತ್ತಲಕೋಣೆಯಲ್ಲಿ ಮತ್ತೊಂದು ಜಗತ್ತು ಸೃಷ್ಟಿಸಿ ಬೆರಗುಮೂಡಿಸುತ್ತಿದ್ದವರೀಗ ಕಣ್ಣೆದುರಿನ ಕಟುವಾಸ್ತವಕ್ಕೆ ಕಂಗಾಲಾಗಿದ್ದಾರೆ. ಮೊನ್ನೆಮೊನ್ನೆಯಷ್ಟೇ ಮೈತೊಳೆದುಕೊಂಡು ಹೊಸ ಉತ್ಸಾಹದೊಂದಿಗೆ ನಗುತ್ತ ಪ್ರೇಕ್ಷಕರನನ್ನು ಬರಮಾಡಿಕೊಂಡಿದ್ದ ಚಿತ್ರಮಂದಿರಗಳು ಈಗ ಒಡಲೊಳಗೆ ಗಾಢಾಂಧಕಾರವನ್ನಷ್ಟೇ ತುಂಬಿಕೊಂಡು ಕಳವಳಿಸುತ್ತ ನಿಂತಿವೆ. ಬೋರ್ಡಿನ ಮೇಲೆ ಮೆತ್ತಿದ ದೂಳು ಅವುಗಳ ಕೊನೆಯ ದಿನಗಳ ಬೀಳ್ಕೊಡುಗೆಗೆ ಬಂದು ಕೂತ ಹಾಗಿದೆ. ರಂಜನೆಯ ವ್ಯವಸಾಯವನ್ನೇ ನಂಬಿದ್ದ ಬಣ್ಣದಲೋಕದ ಮಾಸಿದ ಮುಖ ನಾಳೆಗಳ ಬಗ್ಗೆ ಆತಂಕ ಹುಟ್ಟಿಸುವಂತಿದೆ.

■ ಪದ್ಮನಾಭ ಭಟ್